ಬಿಬಿಎಂಪಿ ಕೇಂದ್ರ ಕಛೇರಿಯಲ್ಲಿ "ಸಂವಿಧಾನ ದಿನ" ಆಚರಣೆ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ "ಸಂವಿಧಾನ ದಿನ"ದ ಅಂಗವಾಗಿ ಮಾನ್ಯ ಆಡಳಿತಗಾರರು, ಮಾನ್ಯ ಆಯುಕ್ತರು ರವರು ಇಂದು ಪಾಲಿಕೆ ಕೇಂದ್ರ ಕಛೇರಿ ಆವರಣದಲ್ಲಿರುವ ಡಾ. ಬಿ.ಆರ್.ಅಂಬೇಡ್ಕರ್ ರವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪುಷ್ಪನಮನ ಸಲ್ಲಿಸಿದರು. ತದನಂತರ ಸಭಾಂಗಣ -1ರಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಬಳಿಕ ಸಂವಿಧಾನ ಪ್ರಸ್ತಾವನೆಯ ಪ್ರತಿಜ್ಞೆಯನ್ನು ಸ್ವೀಕರಿಸಲಾಯಿತು. ಈ ವೇಳೆ ವಿಶೇಷ ಆಯುಕ್ತರುಗಳಾದ ಶ್ರೀ ಡಿ.ರಂದೀಪ್, ಶ್ರೀ ರಾಜೇಂದ್ರ ಚೋಳನ್, ಶ್ರೀ ಜೆ.ಮಂಜುನಾಥ್, ಶ್ರೀ ಮನೋಜ್ ಜೈನ್, ಶ್ರೀಮತಿ ತುಳಸಿ ಮದ್ದಿನೇನಿ, ಶ್ರೀ ರವೀಂದ್ರ, ಜಂಟಿ ಆಯುಕ್ತರು(ಹಣಕಾಸು) ಶ್ರೀ ವೆಂಕಟೇಶ್, ಉಪ ಆಯುಕ್ತರು(ಆಡಳಿತ) ಶ್ರೀ ಲಿಂಗಮೂರ್ತಿ, ವಲಯ ಜಂಟಿ ಆಯುಕ್ತರು ಹಾಗೂ ಇನ್ನಿತರೆ ಸಂಬಂಧಪಟ್ಟ ಅಧಿಕಾರಿಗಳು ಉಪಸ್ಥಿತರಿದ್ದರು.